1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**976/2025**

ಹೆಸರುಃ ಮುದ್ದುರಂಗಯ್ಯ ಚಾಸಾಃ 1

ತಂದೆಃ ಕೇಶಮೂರ್ತಿ ಪ್ರಾಸಾ: 1

ವಯಸ್ಸುಃ 40 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ದೇವರಹಳ್ಳಿ ಗ್ರಾಮ, ಚನ್ನಗಿರಿ ತಾ.

ಸಾಕ್ಷಿಗೆ ದಿನಾಂಕಃ 27-01-2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಕೇಶವಮೂರ್ತಿ ನನ್ನ ತಂದೆ.

ದಿಃ 25-07-2024 ರಂದು ನನ್ನ ತಂದೆ ದೇವರಹಳ್ಳಿಯಿಂದ ಸಂತೆಬೆನ್ನೂರಿಗೆ ಸಮಾಜದ ಮೀಟಿಂಗ್ ಇದ್ದ ಕಾರಣ ಬೈಕ್ ನಂ ಕೆಎ-17/3863 ರಲ್ಲಿ ಹೋಗಿದ್ದು, ಸಂಜೆ 6.30 ರಿಂದ 7.30ರ ಸಮಯಕ್ಕೆ ಮೀಟಿಂಗ್ ಮುಗಿಸಿ ಮನೆಗೆ ಹಿಂದಿರುಗುತ್ತಿದ್ದಾಗ ನುಗ್ಗಿಹಳ್ಳಿ ಕ್ರಾಸ್ ಬಳಿ ಒಂದು ಲಾರಿ ಯಾವುದೇ ಮೂನ್ಸೂಚನೆಯನ್ನು ನೀಡದೆ ಮುಂದೆ ನಿಲ್ಲಿಸಿದ ಕಾರಣ ಹಿಂದೆ ಬರುತ್ತಿದ್ದ ನನ್ನ ತಂದೆಯ ಬೈಕ್ ಗೆ ಡಿಕ್ಕಿಪಡಿಸಿರುತ್ತದೆ. ಸದರಿ ಲಾರಿ ನಂ ಎಂಹೆಚ್-42/ಟಿ-0407 ಆಗಿರುತ್ತದೆ. ಸದರಿ ಅಪಘಾತದಿಂದ ನನ್ನ ತಂದೆಗೆ ಬುರುಡೆಗೆ, ಮುಖಕ್ಕೆ ಕೈ ಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ, ಸದರಿ ವಿಚಾರವನ್ನು ನನಗೆ ನುಗ್ಗಿಹಳ್ಳಿ ಗ್ರಾಮದ ಸ್ಥಳೀಯರು ನನ್ನ ತಂದೆಯ ಮೊಬೈಲ್ ನಿಂದ ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ. ಹಾಗಾಗಿ ನಾನು ತಕ್ಷಣ ನುಗ್ಗಿಹಳ್ಳಿ ಕ್ರಾಸ್ ಗೆ ಹೋಗಿ ನನ್ನ ತಂದೆಯನ್ನು ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಕರೆದುಕೊಂಡುಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮಾರನೇ ದಿನ ಬೆಳಿಗ್ಗೆ ಮೃತಪಟ್ಟಿರುತ್ತಾರೆ.

ಸದರಿ ಅಪಘಾತದ ವಿಚಾರವಾಗಿ ನಾನು ಪೊಲಿಸರಿಗೆ ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ನೀಡಿದ ದೂರಿನ ಹಿನ್ನೆಲೆಯಲ್ಲಿ ಚನ್ನಗಿರಿಯ ಪೊಲೀಸರು ಸ್ಥಳ ಪರಿಶೀಲನೆಗಾಗಿ ಮಾರನೇ ದಿನ ಸ್ಥಳ ಮಹಜರನ್ನು ಜರುಗಿಸಲು ಬಂದಿರುತ್ತಾರೆ. ಸದರಿ ಸಮಯಕ್ಕೆ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-7 ಮತ್ತು 8 ರವರ ಸಮಕ್ಷಮ ಮದ್ಯಾಹ್ನ 2.00 ರಿಂದ 4.00 ರವರೆಗೆ ಮಹಜರನ್ನು ಜರುಗಿಸಿ ಅದಕ್ಕೆ ನಮ್ಮ ಸಹಿ ಪಡೆದಿರುತ್ತಾರೆ.

ಸಾಕ್ಷಿ ಕಡತದಲ್ಲಿನ ಸದರಿ ಸ್ಥಳ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-2 ಕ್ಕೆ ನನ್ನ ಜೊತೆ ಚಾಸಾ-7 ಮತ್ತು 8 ರವರು ಸಹಿ ಮಾಡಿರುತ್ತಾರೆ.

ಮಹಜರ್ ಸಮಯದಲ್ಲಿ ಪೊಲೀಸರು ಭಾವಚಿತ್ರವನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಕಚ್ಚಾ ನಕಾಶೆಯಾಗಿದ್ದು. ಅದನ್ನು ನಿಪಿ-4 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನನ್ನ ತಂದೆಗೆ ಅಪಘಾತಪಡಿಸಿದ ಲಾರಿಯನ್ನು ಮತ್ತು ನನ್ನತಂದೆ ಚಲಾಯಿಸುತ್ತಿದ್ದ ಬೈಕ್ ನ್ನು ನೋಡಿದರೆ ಗುರುತಿಸುತ್ತೇನೆ. ಆದರೆ ಅಪಘಾತಪಡಿಸಿದ ಚಾಲಕನನ್ನು ನಾನು ನೋಡಿಲ್ಲ, ಸಾಕ್ಷಿ ವಾಹನಗಳ ತಡೆ ಪಂಚನಾಮೆ ಸಮಯದಲಿಲ ತೆಗೆಯಲಾಯಿತು ಎನ್ನಲಾದ ಪೊಟೋಗಳಲ್ಲಿನ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ, ಸದರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿ5 ಮತ್ತು 6 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ದೂರು ಮತ್ತು ಪಂಚನಾಮೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು ಮತ್ತು ಪಂಚನಾಮೆಯನ್ನು ನೋಡಲಾಗಿ ಸಾಕ್ಷಿಯು ದೂರು ಮತ್ತು ಪಂಚನಾಮೆಗೆ ಭಾಗಶಃ ಪ್ರತಿಕೂಲ**

**ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ಸದರಿ ದಿನಾಂಕದಂದು ನನ್ನ ತಂದೆ ಸಂಜೆ 6.30ರ ಸಮಯಕ್ಕೆ ಸಂತೆಬೆನ್ನೂರು - ಚನ್ನಗಿರಿ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ನನ್ನ ತಂದೆ ಚಲಾಯಿಸುತ್ತಿದ್ದ ಬೈಕ್ ನಂ ಕೆಎ-17/ಹೆಚ್‌ಪಿ-6383 ಎಂದರೆ ಸರಿ. ಸದರಿ ಸಮಯಕ್ಕೆ ಲಾರಿ ಏಕಾ ಏಕಿ ಚಾಲನೆ ಮಾಡಿಕೊಂಡು ಬಂದು ಯಾವುದೇ ಮೂನ್ಸೂಚನೆ ಕೊಡದೇ ಒಮ್ಮೆಲೆ ಬ್ರೇಕ್ ಹಾಕಿ ಸ್ಲೋ ಮಾಡಿದ್ದರಿಂದ ನನ್ನ ತಂದೆ ಚಲಾಯಿಸುತ್ತಿದ್ದ ಬೈಕ್ ಲಾರಿಯ ಹಿಂದಿನ ಭಾಗಕ್ಕೆ ಡಿಕ್ಕಿಯಾಯಿತು ಎಂದರೆ ಸರಿ. ಸದರಿ ಲಾರಿ ನಂ ಎಂಹೆಚ್/42-ಟಿ-0704 ಎಂದರೆ ಸರಿ. ನನ್ನ ತಂದೆಯನುನ ಚನ್ನಗಿರಿಯ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ದಾಖಲಿಸಿದ್ದೆವು ಎಂದರೆ ಸರಿ.

ದಿಃ 26-07-2024ರಂದು ಸದರಿ ಸಂಗತಿಗಳ ಕುರಿತು ನಾನು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಅದೇ ದಿನ ಪೊಲೀಸರು ನಾನು ತೋರಿಸಿದ ಅಪಘಾತವಾದ ಸ್ಥಳದಲ್ಲಿ ನಿಪಿ-2 ರಂತೆ ಮಹಜರನ್ನು ಮದ್ಯಾಹ್ನ 3.00 ರಿಂದ 3.30 ರವರೆಗೆ ಜರುಗಿಸಿದ್ದು ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ಅಪಘಾತ ನಡೆದ ಸ್ಥಳದ ಕಚ್ಚಾ ನಕಾಶೆಯನ್ನು ನಿಪಿ-4 ರಂತೆ ತಯಾರಿಸಿ ಅದಕ್ಕೆ ನಮ್ಮ ಪಡೆದಿರುತ್ತಾರೆ ಎಂದರೆ ಸರಿ. ಸದರಿ ದಿನ ಲಾರಿಯನ್ನು ಸಚ್ಚಿನ್ ಜಾಧವ್ ಎಂಬಾತ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲನೆ ಮಾಡಿ ನನ್ನ ತಂದೆಗೆ ಅಪಘಾತಪಡಿಸಿ ಅವರ ಮರಣಕ್ಕೆ ಕಾರಣನಾದ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಜೆ ವಕೀಲರಿಂದಃ</u>**

ನಾನು ದ್ವಿತೀಯ ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-1 ನ್ನು ಪೊಲಿಸೇರು ತಯಾರಿಸಿರುತ್ತಾರೆ. ಅದಕ್ಕೆ ನಾನು ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅಪಘಾತವಾದ ಸಮಯಕ್ಕೆ ನಾನು 6.30 ಗೆ ಅಂಗಡಿಯಲ್ಲಿದ್ದೆ. ನನ್ನ ತಂದೆಗೆ 65 ವರ್ಷ ವಯಸ್ಸಾಗಿತ್ತು. ನನ್ನ ತಂದೆ ಸಂತೆಬೆನ್ನೂರಿನ ಮೀಟಿಂಗ್ ಗೆ ಹೋದಾಗ ನಾನು ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ಸಂಜೆ ಹಿಂದಿರುಗುವಾಗ 6.30

ಅದಕಾರಣ ಮಬ್ಬುಕತ್ತಲು ಕವಿದಿತ್ತು ಎಂದರೆ ಸರಿ. ಹೆದ್ದಾರಿಯಾದ ಕಾರಣ ಸಾಮಾನ್ಯವಾಗಿ ಎಲ್ಲಾ ವಾಹನಗಳು 60 ರಿಂದ 80 ಕಿ ಮೀ ವೇಗದಲ್ಲಿ ಬರುತ್ತವೆ ಎಂದರೆ ಸರಿ. ನನ್ನ ತಂದೆಯೂ ಸಹ ಸದರಿ ವೇಗದ ಮಿತಿಯಲ್ಲಿ ಬರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಸಂತೆಬೆನ್ನೂರಿಗೆ ತಿಂಗಳಿಗೆ ಹಲವು ಬಾರಿ ಹೋಗುತ್ತಿದ್ದರು. ನನ್ನ ತಂದೆಗೆ ಸದರಿ ಹೆದ್ದಾರಿಯನ್ನು ಸತತವಾಗಿ ಬಳಸುತ್ತಿದ್ದರಿಂದ ಯಾವ ಸ್ಥಳದಲ್ಲಿ ರಸ್ತೆಯ ಹುಬ್ಬು ತಗ್ಗುಗಳಿಗೆ ತಿರುವುಗಳಿವೆ ಎಂದು ಗೊತ್ತಿತ್ತು ಎಂದರೆ ಸರಿ. ನನ್ನ ತಂದೆಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿ. ಹಾಗಾಗಿ ಅವರಿಗೆ ವಾಹನವನ್ನು ಚಲಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

ಯಾವುದೇ ವಾಹನಗಳ ಬ್ರೇಕ್ ನ ಮೇಲೆ ಕಾಲಿಟ್ಟಾಗ ಬ್ರೇಕ್ ಲೈಟ್ ಹತ್ತುತ್ತದೆ ಎಂದರೆ ಸರಿ. ನುಗ್ಗಿ ಹಳ್ಳಿ ಕ್ರಾಸ್ ಬಳಿ ಯಾವುದೇ ಅಂಗಡಿಗಳು ಇಲ್ಲ ಮುಗ್ಗಟ್ಟುಗಳು ಅಥವಾ ಪಾರ್ಕಿಂಗ್ ಸ್ಥಳ ಇಲ್ಲ ಎಂದರೆ ಸರಿ. ಹಾಗಾಗಿ ಸದರಿ ಲಾರಿಯನ್ನು ಆರೋಪಿ ನಿಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತದ ಮಾಹಿತಿಯನ್ನು ತಿಳಿಸಿದ ಸ್ಥಳಿಯರ ವಿವರ ನನಗೆ ಗೊತ್ತಿಲ್ಲ. ಹಾಗಾಗಿ ನನಗೆ ಅಪಘಾತದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಮೆಗ್ಗಾನ್ ಆಸ್ಪತ್ರೆಯಲ್ಲಿ ನಾನು 2 ದಿನ ಇದೆ. ದಿಃ 26-07-2024 ರಂದು ನನ್ನ ತಂದೆಯ ಮೃತ ಶರೀರವನ್ನು ಪಡೆದಿರುತ್ತೇವೆ.

ನಿಪಿ-1ನ್ನು ನಾನು ಅದೇ ದಿನ ದಾಖಲಿಸಿರುತ್ತೇನೆ. ನನ್ನ ತಂದೆಯ ಅಂತ್ಯ ಸಂಸ್ಕಾರವನ್ನು ಅದೇ ದಿನ ಸಂಜೆ 7.30 ಕ್ಕೆ ಮಾಡಿರುತ್ತೇವೆ. ಪೊಲೀಸರು ಮಹಜರನ್ನು ಜರುಗಿಸಲು ಅದೇ ದಿನ ಮದ್ಯಾಹ್ನ 2.00 ಗಂಟೆಗೆ ಬಂದಿರುತ್ತಾರೆ. ಪೊಲೀಸರು ಮಹಜರನ್ನು ಜರುಗಿಸಲು ಬಂದಾಗ ನಾನು ಮನೆಯಲ್ಲಿದ್ದೆ. ಸಮಯ 12.30 ಗಂಟೆಯಾಗಿತ್ತು. ಚಾಸಾ-7 ಮತ್ತು 8 ರವರು ನಮ್ಮ ಗ್ರಾಮದವರು. ನಿಪಿ-2 ರಲ್ಲಿ ಬರೆದವಿಚಾರ ನನಗೆ ಗೊತ್ತಿಲ್ಲ, ಸದರಿ ದಾಖಲೆಗೆ ನಾನುಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿಲ್ಲ ನನ್ನ ತಂದೆಯ ತಪ್ಪಿನಿಂದಆಗಿದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ</u>**

**.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**